ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:09:ಯೋಜನೆ:2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:08.12.2017

# ಸುತ್ತೋಲೆ

ವಿಷಯ: 2017-18ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಛೇರಿ ಹಾಗೂ ಇತರೆ ವೆಚ್ಚಗಳಿಗೆ ಸಂಬಂಧಿಸಿದ ಮಾಹಿತಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಅನುದಾನ ಬಿಡುಗಡೆ ಆದೇಶ ಸಂಖ್ಯೆ: ಕಾಶಿಇ:09:ಯೋಜನೆ:ಅ.ಬಿ:2017-18, ದಿ:10.07.2017 ಮತ್ತು ದಿ:28.10.2017

-------

2017-18ನೇ ಸಾಲಿಗೆ ಲೆಕ್ಕಶೀರ್ಷಿಕೆ:2202-03-103-2-01ರ ಉಪ ಲೆಕ್ಕ ಶೀರ್ಷಿಕೆ: (052), (059) ಮತ್ತು (071) ರಡಿಯಲ್ಲಿ ಕ್ರಮವಾಗಿ ಕಛೇರಿ ವೆಚ್ಚ, ದೂರವಾಣಿ, ವಿದ್ಯುತ್, ನೀರು, ಲೇಖನ ಸಾಮಗ್ರಿ, ಅನ್‌ಸ್ಕಿಲ್ಡ್ ನೌಕರರ ವೇತನ, ಇತರೆ ವೆಚ್ಚಗಳನ್ನು ಭರಿಸಲು ಉಲ್ಲೇಖಿತ ಸಮ ಸಂಖ್ಯೆಯ ಆದೇಶಗಳಲ್ಲಿ ಅನುದಾನ ಬಿಡುಗಡೆ ಮಾಡಲಾಗಿದ್ದು, ಬಿಡುಗಡೆ ಮಾಡಲಾಗಿರುವ ಅನುದಾನಕ್ಕೆ ಸಂಬಂಧಿಸಿದಂತೆ ಇದುವರೆಗಿನ ವೆಚ್ಚ, ಉಳಿಕೆ ಅನುದಾನ ಮತ್ತು ಈಗಾಗಲೇ ಬಿಡುಗಡೆ ಮಾಡಿರುವ ಅನುದಾನವನ್ನು ಹೊರತುಪಡಿಸಿ ಫೆಬ್ರವರಿ-18ರ ಅಂತ್ಯವರೆಗೆ ಅವಶ್ಯವಿರುವ ಹೆಚ್ಚುವರಿ ಅನುದಾನದ ಮಾಹಿತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ **ದಿನಾಂಕ:16.12.2017ರ ಒಳಗಾಗಿ ಸಾಫ್ಟ್‌ಕಾಪಿಯನ್ನು** dce.plan@gmail.com ಗೆ ಕಳುಹಿಸಿಕೊಡಲು(Excel sheet) ಹಾಗೂ ಹಾರ್ಡ್‌ಕಾಪಿಯನ್ನು ಸಹ ಕಳುಹಿಸಲು ಸೂಚಿಸಿದೆ.

ಮುಂದುವರೆಸುತ್ತಾ, ಬಿಡುಗಡೆಯಾದ ಅನುದಾನದಲ್ಲಿ ಇದುವರೆವಿಗೂ ಶೇಕಡ 20ರಷ್ಟು ಮಾತ್ರ ವೆಚ್ಚವಾಗಿರುವುದು ಖಜಾನೆ-2 ವೆಚ್ಚಪಟ್ಟಿಯಿಂದ ಕಂಡುಬಂದಿರುತ್ತದೆ. ಇದುವರೆವಿಗೂ ಸರ್ಕಾರದಿಂದ ಬಿಡುಗಡೆ ಮಾಡಿರುವ 3 ಕಂತುಗಳ ಅನುದಾನವನ್ನು ಉಲ್ಲೇಖಿತ ಆದೇಶಗಳಲ್ಲಿ ಕಾಲೇಜುಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. ಒಂದು ವೇಳೆ ಇಲ್ಲಿಯವರೆಗೂ ಬಿಡುಗಡೆ ಮಾಡಿರುವ ಅನುದಾನವನ್ನು ಬಳಕೆ ಮಾಡಿಕೊಳ್ಳದಿದ್ದಲ್ಲಿ 4ನೇ ಕಂತಿನ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುವುದಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಾ, ಈ ಕೂಡಲೇ ಬಿಡುಗಡೆ ಮಾಡಿರುವ ಅನುದಾನವನ್ನು ಬಳಕೆ ಮಾಡಿಕೊಳ್ಳಲು ಹಾಗೂ ಹೆಚ್ಚುವರಿಯಾಗಿ ಅನುದಾನ ಬಿಡುಗಡೆ ಮಾಡಿದ್ದಲ್ಲಿ ಮರುಒಪ್ಪಿಸಲು ಸೂಚಿಸಲಾಗಿದೆ. ಒಂದು ವೇಳೆ ಅನುದಾನ ಬಳಕೆಯಾಗದೇ ವ್ಯಪಗತವಾದಲ್ಲಿ ಅಥವಾ ಅನುದಾನವನ್ನು ಹಿಂಪಡೆದಲ್ಲಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗ ನೇರ ಜವಾಬ್ದಾರರಾಗಿರುತ್ತಾರೆ ಹಾಗೂ ಅಂತಹವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಕಟ್ಟುನಿಟ್ಟಾಗಿ ಎಚ್ಚರಿಕೆಯನ್ನು ನೀಡಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು/ಮೈಸೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಗುಲ್ಬರ್ಗಾ-ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

Plan_09_2017-18

## ನಮೂನೆ

ಲೆಕ್ಕ ಶೀರ್ಷಿಕೆ:2202-03-103-2-01 "ಇತರೆ ಸರ್ಕಾರಿ ಕಾಲೇಜುಗಳು" ಉಪ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಿದ, ಉಳಿಕೆ & ಅವಶ್ಯವಿರುವ ಹೆಚ್ಚುವರಿ ಅನುದಾನದ ಪಟ್ಟಿ

ಕಾಲೇಜಿನ ಹೆಸರು:

| 052 | | | | 059 | | | | 071 | | | |
|---|---|---|---|---|---|---|---|---|---|---|---|
| ಬಿಡುಗಡೆ ಮಾಡಿರುವ ಅನುದಾನದ ಮೊತ್ತ | ವೆಚ್ಚ ಮಾಡಿರುವ ಅನುದಾನದ ಮೊತ್ತ | ಉಳಿಕೆ ಇರುವ ಅನುದಾನದ ಮೊತ್ತ | ಅವಶ್ಯವಿರುವ ಹೆಚ್ಚುವರಿ ಅನುದಾನದ ಮೊತ್ತ | ಬಿಡುಗಡೆ ಮಾಡಿರುವ ಅನುದಾನದ ಮೊತ್ತ | ವೆಚ್ಚ ಮಾಡಿರುವ ಅನುದಾನದ ಮೊತ್ತ | ಉಳಿಕೆ ಇರುವ ಅನುದಾನದ ಮೊತ್ತ | ಅವಶ್ಯವಿರುವ ಹೆಚ್ಚುವರಿ ಅನುದಾನದ ಮೊತ್ತ | ಬಿಡುಗಡೆ ಮಾಡಿರುವ ಅನುದಾನದ ಮೊತ್ತ | ವೆಚ್ಚ ಮಾಡಿರುವ ಅನುದಾನದ ಮೊತ್ತ | ಉಳಿಕೆ ಇರುವ ಅನುದಾನದ ಮೊತ್ತ | ಅವಶ್ಯವಿರುವ ಹೆಚ್ಚುವರಿ ಅನುದಾನದ ಮೊತ್ತ |
| | | | | | | | | | | | |
| | | | | | | | | | | | |

| 059 ರಡಿಯಲ್ಲಿ ಹೆಚ್ಚುವರಿ ಕೋರಿರುವ ಮೊತ್ತಕ್ಕೆ ವೆಚ್ಚವಾರು ವಿವರ | ಸಿಬ್ಬಂದಿ ಸಂಖ್ಯೆ | ಅವಧಿ | ಕೋರಿರುವ ಮೊತ್ತ |
|---|---|---|---|
| ಅನ್‌ಸ್ಕಿಲ್ಡ್ ಸಿಬ್ಬಂದಿಗೆ | | | |
| ಕಛೇರಿ ವೆಚ್ಚಕ್ಕೆ | – | ಫೆಬ್ರವರಿ-19ರ ಅಂತ್ಯದವರೆಗೆ | |
| ಇತರೆ(ವಿವರ ನೀಡುವುದು) | – | | |

**ಸೂಚನೆ:**

1) ಇಲಾಖೆಯಿಂದ ಒದಗಿಸುವ ಅನುದಾನದಲ್ಲಿ ಸಂಭಾವನೆಯನ್ನು ನೀಡುತ್ತಿದ್ದಲ್ಲಿ ಮಾತ್ರ ಪ್ರಸ್ತುತ ಸಾಲಿಗೆ ಅನ್‌ಸ್ಕಿಲ್ಡ್ ಸಿಬ್ಬಂದಿಗೆ ಅವಶ್ಯವಿರುವ ಅನುದಾನದ ಮೊತ್ತವನ್ನು 059ರಡಿಯಲ್ಲಿ ಕೋರತಕ್ಕದ್ದು, ಸಿ.ಡಿ.ಸಿ. ವತಿಯಿಂದ ಸಂಭಾವನೆಯನ್ನು ನೀಡುತ್ತಿದ್ದಲ್ಲಿ ಅನುದಾನ ಕೋರತಕ್ಕದ್ದಲ್ಲ.(ಸರ್ಕಾರದ ಆದೇಶ ಸಂಖ್ಯೆ:ಆಇ:3:ಟಿಎಫ್‌ಪಿ:2017 ದಿನಾಂಕ:07.07.2017ರ ಪ್ರಕಾರ ಅನ್‌ಸ್ಕಿಲ್ಡ್ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದನ್ನು ರದ್ದುಪಡಿಸಿದ್ದು ಇವರುಗಳಿಗೆ ಫೆಬ್ರವರಿ-2018ರ ವರೆಗೆ ಮಾತ್ರ ಸಂಭಾವನೆಯನ್ನು ನೀಡಲು ಅವಕಾಶವಿರುತ್ತದೆ. ಈ ಆದೇಶವನ್ನು ಈಗಾಗಲೇ ಈ ಕಛೇರಿಯ ಪತ್ರ ಸಂಖ್ಯೆ:ಕಾಶಿಇ:14:ಯೋಜನೆ-2016-17 ದಿನಾಂಕ:08-09-2017ರಲ್ಲಿ ಪರಿಚಲಿಸಲಾಗಿದೆ.)
2) ಪ್ರತಿ ಉಪ ಲೆಕ್ಕ ಶೀರ್ಷಿಕೆಯಡಿಯಲ್ಲಿ ಹೆಚ್ಚುವರಿ ಅನುದಾನ ಕೋರುವಾಗ ಅಗತ್ಯಕ್ಕೆ ತಕ್ಕಂತೆ ಮಾತ್ರ ಅನುದಾನ ಕೋರುವುದು.

ಸಹಿ/-
ಪ್ರಾಂಶುಪಾಲರು